RNU AIR DHARWAD

# AUGUST 16, 2024

## AKASHAVANI - DHARWAD

## PRADESH SAMACHARA (KANNADA) 07.05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **78ನೇ ಸ್ವಾತಂತ್ರ್ಯೋತ್ಸವ; 2047ಕ್ಕೆ ವಿಕಸಿತ ಭಾರತದ ಜನ ಸಂಕಲ್ಪ – ಪ್ರಧಾನಮಂತ್ರಿ.**
- **ರಾಷ್ಟ್ರೀಯ ಕಾಂಗ್ರೆಸ್‌ನ ಐತಿಹಾಸಿಕ ಬೆಳಗಾವಿ ಅಧಿವೇಶನಕ್ಕೆ, ನೂರು ವರ್ಷ ಪೂರ್ಣ – ಮುಖ್ಯಮಂತ್ರಿ.**
- **ಎಸ್.ಎಸ್.ಎಲ್.ವಿ. ಡಿ–3 ಉಪಗ್ರಹ, ಇಸ್ರೋದಿಂದ ಈ ಬೆಳಗ್ಗೆ ಉಡಾವಣೆ.**
- **ನಾಡಿನಾದ್ಯಂತ ಇಂದು, ವರ ಮಹಾಲಕ್ಷ್ಮೀ ಹಬ್ಬದ ಸಂಭ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**‘2047ಕ್ಕೆ ವಿಕಸಿತ ಭಾರತದ ಸಂಕಲ್ಪ’ ಎಂಬ ಘೋಷವಾಕ್ಯದಡಿ, 78ನೇ ಸ್ವಾತಂತ್ರ್ಯೋತ್ಸವವನ್ನು, ದೇಶಾದ್ಯಂತ ಸಂಭ್ರಮ ಹಾಗೂ ಸಡಗರದಿಂದ, ಜನೋತ್ಸವವಾಗಿ ಆಚರಿಸಲಾಯಿತು.**

<><><>

**ಹೊಸ ದಿಲ್ಲಿಯ ಕೆಂಪುಕೋಟೆಯ ಪ್ರಧಾನ ಕಾರ್ಯಕ್ರಮದಲ್ಲಿ, 11ನೇ ಬಾರಿ ರಾಷ್ಟ ಧ್ವಜಾರೋಹಣ ನೆರವೇರಿಸಿದ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶದ ಜನತೆಯನ್ನುದ್ದೇಶಿಸಿ, ದಾಖಲೆಯ ಸುಧೀರ್ಘ ಭಾಷಣ ಮಾಡಿದರು.**

<><><>

**ಆತ್ಮ ನಿರ್ಭರ್ ದಿಂದ ದೇಶ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಭಾರತ 3ನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ. ‘ವೋಕಲ್ ಫಾರ್ ಲೋಕಲ್’ ಯೋಜನೆ ಮೂಲಕ, ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಗುಡಿ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ನೀಡಲಾಗಿದೆ. ಬುಡಕಟ್ಟು ಸಮುದಾಯಕ್ಕೆ ಲಾಭ ತಲುಪುವಂತೆ, ಯೋಜಿಸಲಾಗಿದೆ ಎಂದರು.**

<><><>

ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿ ಹತ್ಯೆ ಖಂಡಿಸಿದ ಪ್ರಧಾನಮಂತ್ರಿ, ಮಹಿಳೆಯರ ಮೇಲಿನ ದೌರ್ಜನ್ಯ ನಡೆಸುವ ಅಪರಾಧಿಗಳಿಗೆ ಕಠಿಣ ಶಿಕ್ಷೆಯ ಆಶ್ವಾಸನೆ ನೀಡಿದರು.

<><><>

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗಿಯಾಗಿದ್ದ, ಕ್ರೀಡಾಪಟುಗಳನ್ನು ಅಭಿನಂದಿಸಿದರು.

<><><>

ನಳಂದಾ ವಿಶ್ವ ವಿದ್ಯಾಲಯದ ಪರಂಪರೆಯನ್ನು ಪುನರುಜ್ಜೀವಿತ ಗೊಳಿಸಿ, 'ಸ್ಕಿಲ್ ಇಂಡಿಯಾ ಪ್ರಕಲ್ಪದ ಮೂಲಕ, ಕೌಶಲಯುತ ಭಾರತದ ಪುನರುತ್ಥಾನಕ್ಕೆ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

<><><>

"ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಅಧ್ಯಕ್ಷತೆಯಲ್ಲಿ, 1924 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಚಾರಿತ್ರಿಕ ಬೆಳಗಾವಿ ಅಧಿವೇಶನ ನಡೆದು, ಈಗ ನೂರು ವರ್ಷಗಳು.. ಹಾಗೂ, ಬಾಬಾಸಾಹೇಬ್ ಅಂಬೇಡ್ಕರ್ ಅವರು, 'ಬಹಿಷ್ಕೃತ ಹಿತಕಾರಿಣಿ ಸಭಾ' ಸ್ಥಾಪಿಸಿ, ನೂರು ವರ್ಷಗಳು ತುಂಬಿದ ಈ ಸಂದರ್ಭದಲ್ಲಿ, ಸ್ಮರಣೀಯ ಮತ್ತು ಅರ್ಥಪೂರ್ಣ ಕಾರ್ಯಕ್ರಮಗಳನ್ನು, ರಾಜ್ಯ ಸರ್ಕಾರ ಆಯೋಜಿಸುತ್ತಿದೆ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸಲಾಗಿದ್ದ, 78 ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ, ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಗೌರವ ರಕ್ಷೆ ಸ್ವೀಕರಿಸಿ ಅವರು ಮಾತನಾಡಿದರು.

ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ, ಜಾಗತಿಕ ಮೂಲ ಆದಾಯ (ಯುನಿವರ್ಸಲ್ ಬೇಸಿಕ್ ಇನ್‌ಕಮ್) ಪರಿಕಲ್ಪನೆಯನ್ನು, ಸಾಕಾರಗೊಳಿಸುತ್ತಿರುವ ರಾಜ್ಯ ಕರ್ನಾಟಕ ಎಂಬುದು, ಹೆಮ್ಮೆಯ ವಿಷಯ ಎಂದು ಮುಖ್ಯಮಂತ್ರಿ ನುಡಿದರು.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ, ಪ್ರಸಕ್ತ ಸಾಲಿನಲ್ಲಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ, 5 ಸಾವಿರ ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಮಾನತೆಗೆ ವಿಶೇಷ ಆದ್ಯತೆ ನೀಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

<><><>

ಇತಿಹಾಸ ಪ್ರಸಿದ್ಧ, ದಕ್ಷಿಣದ ಜಲಿಯನ್ ವಾಲಾಬಾಗ್ ಎಂದೇ ಗುರುತಿಸಲಾಗುವ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕಿನ ವಿದುರಾಶ್ವತ್ಥದಲ್ಲಿ, 78ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆ, ರಾಷ್ಟ್ರ ಧ್ವಜಾರೋಹಣ ನೆರವೇರಿತು. ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ಅವರು, ಹುತಾತ್ಮ ಸ್ವಾತಂತ್ರ್ಯ ಸೇನಾನಿಗಳ ಸ್ತೂಪಕ್ಕೆ, ಪುಷ್ಪ ನಮನ ಸಲ್ಲಿಸಿದರು.

<><><>

ಕೊಪ್ಪಳದ ಐತಿಹಾಸಿಕ, ಅಶೋಕ ವೀರ ಸ್ತಂಭವನ್ನು, ಜಿಲ್ಲಾ ಉಸ್ತುವಾರಿ ಸಚಿವ, ಶಿವರಾಜ ತಂಗಡಗಿ, ಸ್ವಾತಂತ್ರ್ಯೋತ್ಸವ ದಿನದಂದು, ಲೋಕಾರ್ಪಣೆ ಮಾಡಿದರು.

<><><>

ಎಸ್.ಎಸ್.ಎಲ್.ವಿ. ಡಿ–3 ಉಪಗ್ರಹವನ್ನು, ಶ್ರೀ ಹರಿಕೋಟಾದ ಸತೀಶ ಧವನ್ ಬಾಹ್ಯಾಕಾಶ ಉಡಾವಣಾ ಕೇಂದ್ರದಿಂದ, ಈ ಬೆಳಗ್ಗೆ 9 ಗಂಟೆ 17 ನಿಮಿಷಕ್ಕೆ ಉಡಾವಣೆ ಮಾಡಲು, ಇಸ್ರೋ ಸಕಲ ಸಿದ್ಧತೆ ಕೈಗೊಂಡಿದೆ. ಭಾರತೀಯ ಕೈಗಾರಿಕೆಗಳಿಗೆ ಸಹಕಾರಿಯಾಗಬಲ್ಲ ಈ ಉಪಗ್ರಹದ ಉಡಾವಣೆಗೆ, ಈ ಬೆಳಗ್ಗೆ, 2 ಗಂಟೆ 47 ನಿಮಿಷದಿಂದ ಇಳಿ ಎಣಿಕೆ ಆರಂಭವಾಗಿದೆ ಎಂದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಎಕ್ಸ್ ಜಾಲತಾಣದಲ್ಲಿ ಪ್ರಕಟಿಸಿದೆ.

<><><>

ಭೂ ಸುರಕ್ಷೆ ಯೋಜನೆಯಡಿ, ರಾಜ್ಯದ 31 ತಾಲೂಕು ಕಚೇರಿಯ ಕಡತಗಳ ಡಿಜಿಟಲೀಕರಣ ಆರಂಭವಾಗಿದ್ದು, ಸೆಪ್ಟೆಂಬರ್ ನಿಂದ ರಾಜ್ಯದ ಎಲ್ಲ ತಾಲೂಕುಗಳಿಗೆ ವಿಸ್ತರಿಸಲಾಗುವುದು ಎಂದು, ಕಂದಾಯ ಖಾತೆ ಸಚಿವ ಕೃ ಣ ಬೈರೇಗೌಡ ಹೇಳಿದ್ದಾರೆ. ಬಳ್ಳಾರಿಯಲ್ಲಿ ಸುದ್ದಿಗಾರರರೊಂದಿಗೆ ಮಾತನಾಡಿದ ಸಚಿವರು, ತಾಲೂಕು ಕಚೇರಿಯ ಡಿಜಟಲೀಕರಣ ಪ್ರಕ್ರಿಯೆ, ಬಳ್ಳಾರಿ ಜಿಲ್ಲೆಯ ಕುರುಗೋಡು ಹಾಗೂ ಜಿಲ್ಲಾಧಿಕಾರಿ ಕಚೇರಿಯಲ್ಲೂ ನಡೆಯುತ್ತಿದೆ ಎಂದರು.

<><><>

ರಾಜ್ಯದ ಅಂಧ ಮಕ್ಕಳ ಶಾಲೆಗಳಿಗೆ, ಇನ್ನು ಮುಂದೆ ಉಚಿತವಾಗಿ ವಿದ್ಯುತ್ ಪೂರೈಸಲಾಗುವುದು ಎಂದು, ಇಂಧನ ಖಾತೆ ಸಚಿವ, ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಚಿಕ್ಕಮಗಳೂರಿನ ಆಶಾಕಿರಣ ಅಂಧ ಮಕ್ಕಳ ಪಾಠ ಶಾಲೆಗೆ ಭೇಟಿ ನೀಡಿ, ಮಾತನಾಡಿದ ಸಚಿವರು, ರಾಜ್ಯಾದ್ಯಂತ 36 ಅಂಧ ಮಕ್ಕಳ ಶಾಲೆಗಳಿವೆ. ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಿದಂತೆ, ಅಂಧ ಮಕ್ಕಳ ಶಾಲೆಗಳಿಗೂ ತಕ್ಷಣದಿಂದ ಉಚಿತ ವಿದ್ಯುತ್ ಪೂರೈಸಲು, ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

ಚಿತ್ರದುರ್ಗ ನಗರ ಹಾಗೂ ವ್ಯಾಪ್ತಿಯ, ಕಲ್ಯಾಣಿ, ಕೆರೆಗಳ ಸ್ವಚ್ಛತೆ ಹಾಗೂ ನೀರು ಕಲುಷಿತವಾಗುವುದನ್ನು ತಡೆಗಟ್ಟಲು, ಅಗತ್ಯ ಕ್ರಮ ಕೈಗೊಳ್ಳುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್, ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, 'ನಗರದ ಕವಾಡಿಗರ ಹಟ್ಟಿಯಲ್ಲಿ, ಕಲುಷಿತ ನೀರಿನಿಂದ ಸಂಭವಿಸಿದ ಅಹಿತಕರ ಘಟನೆಯನ್ನು, ಲೋಕಾಯುಕ್ತರು ಗಂಭೀರವಾಗಿ ಪರಿಗಣಿಸಿದ್ದಾರೆ. ಮರುಕಳಿಸದಂತೆ ಪ್ರಥಮ ಆದ್ಯತೆ ನೀಡಿ' ಎಂದು, ನಿರ್ದೇಶಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರೈತರಿಗೆ ಕೃಷಿ ಕುರಿತು, ವೈಜ್ಞಾನಿಕ ತಿಳಿವಳಿಕೆ ಮೂಡಿಸಲು, ಕೇಂದ್ರ ಸರ್ಕಾರ ಮಾಸಿಕ 'ಕಿಸಾನ್ ಕಿ ಬಾತ್' ಬಾನುಲಿ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಿದೆ ಎಂದು, ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ತಿಳಿಸಿದ್ದಾರೆ. ಆಧುನಿಕ ಕೃಷಿ ಪದ್ಧತಿ ಬಗ್ಗೆ ತಿಳಿವಳಿಕೆ, ವೈಜ್ಞಾನಿಕ ಮಾಹಿತಿ ಮೂಲಕ, ರೈತರನ್ನು ಆರ್ಥಿಕವಾಗಿ ಸಬಲಗೊಳಿಸುವ ಕ್ರಮವಾಗಿದೆ ಎಂದು, ಅವರು ತಿಳಿಸಿದ್ದಾರೆ.

<><><>

ಕೊಪ್ಪಳದ ತೋಟಗಾರಿಕೆ ಇಲಾಖೆ ಕಚೇರಿಯ ಆವರಣದಲ್ಲಿ ಆಯೋಜಿಸಿದ, ತೋಟಗಾರಿಕೆ ಅಭಿಯಾನ ಮತ್ತು ಸಸ್ಯ ಸಂತೆ ಕಾರ್ಯಕ್ರಮಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಚಾಲನೆ ನೀಡಿದರು. ಈ ತಿಂಗಳ 20ನೇ ತಾರೀಖಿನ ವರೆಗೆ ನಡೆಯುವ, ಸಸ್ಯ ಸಂತೆಯ ವೈಶಿಷ್ಟ್ಯ ಹಾಗೂ ರೈತರಿಗಿರುವ ಲಾಭಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಕೃ ಣ ವುಕ್ಕುಂದ.

<><><>

ಕೃ ್ಣ ವುಕ್ಕುಂದ ಧ್ವನಿ 42 ಸೆಕೆಂದುಗಳು

<><><>

ಇಂದು, ಶ್ರಾವಣ ಮಾಸದ ಎರಡನೇ ಶುಕ್ರವಾರ. ವರಲಕ್ಷ್ಮೀ ಅಥವಾ ವರ ಮಹಾಲಕ್ಷ್ಮೀ ವ್ರತವನ್ನು, ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಗುತ್ತಿದೆ. ವರ ಮಹಾಲಕ್ಷ್ಮೀ ವ್ರತಾಚರಣೆ ಹಿನ್ನೆಲೆ, ಧಾರವಾಡದ ಮಾರುಕಟ್ಟೆ ಸೇರಿದಂತೆ, ರಾಜ್ಯದ ಎಲ್ಲ ಪ್ರಮುಖ ಪೇಟೆಗಳಲ್ಲಿ, ಹಬ್ಬದ ಸಾಮಗ್ರಿಗಳ ಖರೀದಿ ಭರಾಟೆ ನಿನ್ನೆ ಜೋರಾಗಿತ್ತು. ಬೆಲೆ ಏರಿಕೆಯ ಬಿಸಿ ಮಧ್ಯೆ, ತುಂತುರು ಮಳೆಯಲ್ಲಿ ಮಿಂದು, ಜನ ಖರೀದಿಸಿದ್ದು ವಿಶೇಷವಾಗಿತ್ತು. ವರಲಕ್ಷ್ಮೀ ವ್ರತವು ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದ ಭಾಗಗಳಲ್ಲಿ ವ್ಯಾಪಕವಾಗಿ ಜನಪ್ರಿಯವಾಗಿರುವ ಹಬ್ಬವಾಗಿದೆ. ಸಂಪತ್ತು ಮತ್ತು ಸಮೃದ್ಧಿಯ ಪ್ರತೀಕವಾದ, ವರ ಲಕ್ಷ್ಮೀಯನ್ನು ಇಂದು, ವಿಶೇಷವಾಗಿ ಅಲಂಕರಿಸಿ ಪೂಜಿಸಲಾಗುತ್ತದೆ.

<><><>

ದಕ್ಷಿಣಕನ್ನಡ ಜಿಲ್ಲೆಗೆ, ವಿಶೇ ' ಕ್ರೀಡಾ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಮಂಗಳೂರಿನ, ಮಂಗಳಾ ಕ್ರೀಡಾಂಗಣದ ಬಳಿ ನಿರ್ಮಿಸಿರುವ, ಬಾಲಕಿಯರ ಕ್ರೀಡಾ ವಸತಿ ನಿಲಯವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಜಿಲ್ಲಾಡಳಿತ ಕ್ರೀಡಾ ಯೋಜನೆ ಸಿದ್ಧ ಪಡಿಸಲಿದೆ. ಪ್ರತಿಭಾವಂತ ಹಾಗೂ ಅರ್ಹ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ, ಸಮರ್ಪಕ ತರಬೇತುದಾರರನ್ನು ಒದಗಿಸಲು ಪ್ರತ್ಯೇಕ ಕ್ರಿಯಾ ಯೋಜನೆಯಿಂದ ಸಾಧ್ಯವಾಗಲಿದೆ ಎಂದರು. ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಯೋಜನೆಯಡಿ, ಫುಟ್ಬಾಲ್ ಆಟಗಾರರಿಗಾಗಿ, 2 ಕೋಟಿ ರೂಪಾಯಿ ವೆಚ್ಚದಲ್ಲಿ, ಸುಸಜ್ಜಿತ ಆಸ್ಟ್ರೋ ಟರ್ಫ್ ಕಾಮಗಾರಿಗೆ ಶೀಘ್ರ ಚಾಲನೆ ನೀಡುವುದಾಗಿ, ಸಚಿವರು ತಿಳಿಸಿದರು.

<><><>

ಕಲಬುರಗಿಯ ಹಿರಿಯ ರಾಜಕಾರಣಿ, ಎಸ್.ಕೆ.ಕಾಂತಾ ಅವರಿಗೆ, ರಾಜ್ಯ ಸರ್ಕಾರ ಡಿ.ದೇವರಾಜ ಅರಸು ಪ್ರಶಸ್ತಿ ಘೋಷಿಸಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಅಧಿಕಾರಿ, ಪ್ರಭು ದೊರೆ, ಕಲಬುರಗಿಯ ಎಸ್.ಕೆ.ಕಾಂತಾ ಅವರ ಮನೆಗೆ ಭೇಟಿ ನೀಡಿ, ಅಭಿನಂದನೆ ಸಲ್ಲಿಸಿ, ಅಧಿಕೃತ ಆಹ್ವಾನ ನೀಡಿದರು. ಇದೇ 20 ರಂದು, ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಮುಖ್ಯಮಂತ್ರಿ ಅವರು, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. 5 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆಯನ್ನು ಈ ಪ್ರಶಸ್ತಿ ಒಳಗೊಂಡಿದೆ.

<><><>

ರಾಜ್ಯದ ಮಲೆನಾಡು, ಕರಾವಳಿ ಹಾಗೂ ಉತ್ತರ ಒಳನಾಡು ಭಾಗದ ಹಲವು ಜಿಲ್ಲೆಗಳಲ್ಲಿ, ಇಂದು ಮತ್ತು ನಾಳೆ, ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂದು ನಾಲ್ಕು ಜಿಲ್ಲೆಗಳಿಗೆ 'ಆರೆಂಜ್' ಹಾಗೂ 12 ಜಿಲ್ಲೆಗಳಿಗೆ 'ಯೆಲ್ಲೊ' ಅಲರ್ಟ್ ಪ್ರಕಟಿಸಲಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮುತ್ಸದ್ದಿ ಹಾಗೂ ಮಾಜಿ ಪ್ರಧಾನಮಂತ್ರಿ, ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಪುಣ್ಯ ತಿಥಿ ಇಂದು.

<><><>

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಜಯಂತಿ ಹಿನ್ನೆಲೆ, ಮುಖ್ಯಮಂತ್ರಿ ಸೇರಿದಂತೆ, ರಾಜ್ಯಾದ್ಯಂತ ಗಣ್ಯರು, ಪುತ್ಥಳಿಗೆ ಗೌರವಾರ್ಪಿಸಿದರು.

<><><>

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ, ಮಹಿಳೆಯರ 50 ಕಿಲೋ ವಿಭಾಗದಲ್ಲಿ, ಹೆಚ್ಚಿನ ತೂಕದ ಕಾರಣದಿಂದ, ಅಂತಿಮ ಪಂದ್ಯದಿಂದ ಅನರ್ಹಗೊಂಡಿದ್ದ, ಭಾರತದ ಕುಸ್ತಿಪಟು ವಿನೇಶ್ ಫೋಗಟ್ ಅವರ ಮನವಿಯನ್ನು, ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯ ವಜಾಗೊಳಿಸಿದೆ.

<><><>

ಇತ್ತೀಚೆಗೆ ನಿವೃತ್ತರಾದ ಭಾರತ ಹಾಕಿ ತಂಡದ ಗೋಲ್ ಕೀಪರ್, ಪಿ.ಆರ್. ಶ್ರೀಜೇಶ್ ಅವರ ಗೌರವಾರ್ಥ, ಭಾರತದ ಹಿರಿಯ ಪುರು ’ರ ತಂಡದಿಂದ, ಜರ್ಸಿ ಸಂಖ್ಯೆ 16 ನಿವೃತ್ತಿಗೊಳ್ಳಲಿದೆ ಎಂದು ಹಾಕಿ ಇಂಡಿಯಾ ತಿಳಿಸಿದೆ.

<><><>

ಅಗ್ನಿಪಥ್ ಯೋಜನೆಯಡಿ, ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ, ದೈಹಿಕ ಕ್ಷಮತೆ ಹಾಗೂ ವೈದ್ಯಕೀಯ ಪರೀಕ್ಷೆಗಳನ್ನು, ಇದೇ 20 ರಿಂದ 31ರ ವರೆಗೆ, ಶಿವಮೊಗ್ಗದ ನೆಹರೂ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

<><><>

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ, ಹಾವೇರಿ ಜಿಲ್ಲೆಯ 2 ಲಕ್ಷದ 51 ಸಾವಿರ ರೈತರು ಅರ್ಜಿ ಸಲ್ಲಿಸಿದ್ದಾರೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಅಂತರಹಳ್ಳಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 78ನೇ ಸ್ವಾತಂತ್ರ್ಯೋತ್ಸವ: 2047ಕ್ಕೆ ವಿಕಸಿತ ಭಾರತದ ಸಂಕಲ್ಪ – ಪ್ರಧಾನಮಂತ್ರಿ.
- ರಾಷ್ಟ್ರೀಯ ಕಾಂಗ್ರೆಸ್‌ನ ಐತಿಹಾಸಿಕ ಬೆಳಗಾವಿ ಅಧಿವೇಶನಕ್ಕೆ, ನೂರು ವರ್ಷ ಪೂರ್ಣ – ಮುಖ್ಯಮಂತ್ರಿ.
- ಎಸ್.ಎಸ್.ಎಲ್.ವಿ. ಡಿ–3 ಉಪಗ್ರಹ, ಇಸ್ರೋದಿಂದ ಈ ಬೆಳಗ್ಗೆ ಉಡಾವಣೆ.
- ನಾಡಿನಾದ್ಯಂತ ಇಂದು, ವರ ಮಹಾಲಕ್ಷ್ಮೀ ಹಬ್ಬದ ಸಂಭ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>